ತಾತ್ಸಾರಭಾವ. ಅಂಥದ್ದರಲ್ಲಿ ನನ್ನ ಬಗ್ಗೆ ಬೆಟ್ಟದಷ್ಟು ಕಾಳಜಿ ತೋರುತ್ತಿದ್ದ ಅವನನ್ನು ಕಡೆಗಣಿಸಿದ್ದು ಸರಿಯಲ್ಲವೆಂಬ ತೀರ್ಮಾನಕ್ಕೆ ಬಂದಾಗ ಎದೆಯ ಬಡಿತ ಕಂಟ್ರೋಲ್ ತಪ್ಪುತ್ತದೆ. ಹೃದಯಾಘಾತದಿಂದ ತಪ್ಪಿಸಿಕೊಳ್ಳಬೇಕೆಂಬ ಗಾಬರಿಯಲ್ಲಿ ನಾನೇ ಫೈಲ್ ಎತ್ತಿಕೊಂಡು ಕರೆಯದಿದ್ದರೂ ಒಳಹೋಗುತ್ತೇನೆ. 'ಸಾರ್. ಇಂಪಾರ್ಟೆಂಟ್ ಫೈಲ್ಸ್. ಒಮ್ಮೆ ನೋಡ್ತಿರಾ?' ಎಂದವನ ಎದುರು ದೇವರ ಮುಂದೆ ನಿಂತ ಭಕ್ತಳಾಗುತ್ತೇನೆ. 'ಅಲ್ಲಿಟ್ಟು ಹೋಗ್ರಿ' ಅನ್ನುತ್ತಾನೆ ತಲೆ ಎತ್ತದೆ. ಎಲ್ಲಿ ಕುಸಿದುಬಿಡುವೇನೊ ಎಂದು ಟೇಬಲ್ ಆಸರೆಗೆ ಬಂದು ಉಗುಳು ನುಂಗುತ್ತೇನೆ. ಕತ್ತಿನ ನರಗಳು ಉಬ್ಬುತ್ತವೆ, ಮಾತುಗಳು ಉಗ್ಗುತ್ತವೆ. 'ಸ... ಸ... ಸಾರಿ ಸಾರ್' ಅನ್ನುತ್ತೇನೆ. 'ಏಕೆ... ಏಕೆ ಸಾರಿ ಕೇಳ್ತಿದ್ದೀರಿ?' ತಲೆ ಎತ್ತದೆ ಫೈಲ್ ಮೇಲೆ ಕಣ್ಣಾಡಿಸುತ್ತಿರುತ್ತಾನೆ. 'ನೀವು... ನೀವು ಮೊದಲಿನಂತೆ ನನ್ನ ಜೊತೆ...' ಗದ್ಗದಿತವಾಗಿ ಬಂದ ಮಾತನ್ನು ತುಂಡರಿಸುತ್ತೇನೆ. ತಲೆಎತ್ತಿ ಸಣ್ಣಗೆ ನಗುತ್ತಾನೆ. ಕಳೆದುಕೊಂಡ ಅಮೂಲ್ಯ ನಿಧಿ ಸಿಕ್ಕ ಹಿಗ್ಗು ನರನರಗಳಲ್ಲಿ ಚಿಗುರೊಡೆದಂತೆ ಭಾಸ. 'ಓಕೆ ನನ್ನ ಜೊತೆನಲ್ಲಿ ಮಧ್ಯಾಹ್ನ ಲಂಚ್‌ಗೆ ಬರ್ತಿರಾ? ನನಗೂ ಬೇಸರವಾಗಿದೆ... ಹೊರಗಡೆ ಹೋಗೋಣ್ವೆ?' ಅವನಲ್ಲೂ ವಿಷಾದದ ನಗೆ. ಸಂದಿಗ್ಧತೆಗೆ ಒಳಗಾಗುತ್ತೇನೆ. 'ಟೈಮಿಗೆ ಸರಿಯಾಗಿ ಬಂದು ಬಿಡೋಣಾರೀ. ನಾನು ಯಾವತ್ತೂ ಕಂಪೆನಿ ನಿಯಮ ಉಲ್ಲಂಘಿಸೋನಲ್ಲ... ಗೊತ್ತಲ್ಲ ನಿಮ್ಗೆ?' ಮಾತಿನಲ್ಲೀಗ ಗಂಭೀರತೆ. ಯಾರೇನಂದುಕೊಳ್ಳುವರೋ ಎಂಬ ಎದೆಗುದಿಯಲ್ಲೂ ನಿರಾಕರಿಸುವ ಶಕ್ತಿ ಉಡುಗಿ ತಲೆಯಾಡಿಸುತ್ತೇನೆ. ಹೊರಬಂದಾಗ ಎಲ್ಲರೂ ನನ್ನತ್ತಲೇ ನೋಡುತ್ತಿರುವರೆಂಬ ಅಳುಕಿನಿಂದಲೇ ಕಳ್ಳನೋಟ ಬೀರುತ್ತೇನೆ. ಶ್ರೀಲಕ್ಷ್ಮಿ ವಿನಹ ಬೇರೆಲ್ಲರೂ ತಮ್ಮ ಕೆಲಸದಲ್ಲಿ ಲೀನ. ಶ್ರೀಲಕ್ಷ್ಮಿ ಕೂಡ ಈಗ ಕಣ್ಣು ತಪ್ಪಿಸುತ್ತಾಳೆ. ಮಧ್ಯಾಹ್ನ ಬ್ಯಾಗ್ ಹೆಗಲಿಗೇರಿಸಿ ಹೊರಟಾಗ ಎಲ್ಲರ ಚಿತ್ತ ನನ್ನತ್ತ. 'ಇಲ್ಲೇ ಹತ್ತಿರದಲ್ಲಿ ನನ್ನ ಫ್ರೆಂಡ್ ಮನೆ ಇದೆ. ಮಗಳ ನಾಮಕರಣವಂತೆ. ಹೋಗಿ ಬರ್ತೇನೆ' ಎಂದು ಗೊಣಗಿ ಯಾರ ಉತ್ತರವನ್ನೂ ನಿರೀಕ್ಷಿಸದೆ ಈಚೆ ಬಂದು ದಡದಡನೆ ಮೆಟ್ಟಿಲಿಳಿಯುತ್ತೇನೆ. ಸ್ವಲ್ಪ ದೂರದಲ್ಲಿ ಕಾರ್ ನಿಲ್ಲಿಸಿಕೊಂಡು ನಿಂತಿರುವ ಕಿಶೋರ್ ಕಾಣುತ್ತಾನೆ. ಮುಜಗರದ ಭಾರದಲ್ಲೂ ಸೀರೆಯ ನಿರಿಗೆಗಳು ಅತ್ತ ಚಿಮ್ಮುತ್ತವೆ.

ಫೈವ್‌ಸ್ಟಾರ್ ಹೋಟೆಲ್‌ನ ಮೊದಲ ಪರಿಚಯ. ಊಟ, ನೋಟ, ನಾಚಿಕೆ, ಅಂಜಿಕೆಗಳ ನಡುವೆಯೂ ಮನದಲ್ಲಿ ಜಿಂಕೆಯ ಜಿಗಿತ! 'ಏನಾದ್ರೂ ಮಾತಾಡ್ರಿ ರಂಜನಿ... ಬೋರ್ ಹೊಡೀತಿದೆ' ಮಾತಿಗೆಳೆಯುತ್ತಾನೆ ಕಿಶೋರ್. 'ಕಣ್ಣುಗಳ ಭಾಷೆ ನಿಮಗೆ ತಿಳಿಯದೆ... ಮಾತೇ ಬೇಕೆ?' ಅನ್ನುತ್ತೇನೆ. ಮನವೋ ಗರಿಗೆದರಿದ ನವಿಲು. 'ಓಹ್!' ಅಂದವನೆ ನನ್ನ ಕಣ್ಣುಗಳನ್ನೇ ನೋಡುತ್ತಾ ಪರವಶನಾಗುತ್ತಾನೆ. 'ಕಣ್ಣುಗಳಲ್ಲಿ ಪ್ರೀತಿ ತುಂಬಿ ತುಳುಕುತ್ತಿದೆ... ಆಮ್ ಐ ಕರೆಕ್ಟ್?' ನಾನು ಉತ್ತರಿಸದೆ ಅವನ ನಗೆಗೆ ನಗೆ ಬೆರೆಸುತ್ತೇನೆ. 'ರಿಯಲಿ ಐ ಆಮ್ ಲಕ್ಕಿ' ಅವನ ಪಕ್ಕೆಗಳಲ್ಲಿ ರೆಕ್ಕೆಗಳು ಮೂಡುತ್ತವೆ. 'ಊಟ ಹಿಡಿಸಿತಾ ನಿಮಗೆ?' ಎನ್ನುತ್ತಾನೆ. 'ಸ್ಟಾರ್ ಹೋಟಲ್ ಊಟ, ಎದುರಿನಲ್ಲೂ ಸ್ಟಾರ್ ಇರೋವಾಗ...' ಎಂದು ಮೋಹಕನಗೆ ಚೆಲ್ಲಿದೆನೇನೋ ಅವನು ಅದೇಕೋ ನಾಚಿದ.

ಹೀಗೆ ಜೊತೆಗೂಡುವ ಅವಕಾಶಗಳು ತಿಂಗಳಲ್ಲೊಮ್ಮೆ ಆಗೀಗ ಸಿಗುತ್ತವೆ. 'ನಾವಿಬ್ಬರೂ ಪ್ರೇಮಿಸುತ್ತೇವಾ?' ಅಂಜುತ್ತಲೇ ಕೇಳಿದರೆ, ಹಿಂದೆಯೇ 'ಕೋಪಿಸ್ಕೋಬೇಡಿ ಮತ್ತೆ... ನೀವು ಯಸ್ ಅಂದ್ರೂ 'ನೊ' ಅಂದ್ರೂ ನಾನಂತೂ ನಿಮ್ಮನ್ನು ದೂರಮಾಡಿಕೊಳ್ಳಲಾರದಷ್ಟು ಸೋತು ಹೋಗಿದ್ದೇನೆ ಕಣ್ರೀ' ಅವನದ್ದು ಉದ್ವೇಗದ ಮಾತುಗಳು. 'ಪ್ರೇಮಾನಾ? ಏನೋ ಅಪ್ಪಾ!